11

# ಹತೋಟಿಯಲ್ಲಿಡಲು ಹೋರಾಟ (4:1-10)

ಅಂತರಾಷ್ಟ್ರೀಯ ಬೈಬಲ್ ಶಾಲೆಯಲ್ಲಿ ನಾನು ಕಲಿಯುವಾಗ, ನಮ್ಮ ಪ್ರಾರ್ಥನ ಸಭಾಂಗಣದಲ್ಲಿ, ಪ್ರಸಿದ್ಧಿ ಹೊಂದಿದ್ದ ಹಾಗೂ ಬಹು ಪ್ರಯಾಣ ಮಾಡಿದ್ದ ಪ್ರಸಂಗಿಗಳು ಮಾತನಾಡುತ್ತಿದ್ದರು, "ಸಭೆಗಳಲ್ಲಿ ಇರುವ ಬಹುದೊಡ್ಡ ಸಮಸ್ಯೆ ಏನೆಂದರೆ, ಪರಸ್ಪರ ಹೊಂದಾಣಿಕೆ ಇಲ್ಲದೆ ಇರುವುದೇ" ಪದವಿ ಸಂಪೂರ್ಣ ಮಾಡದೆ ಯೌವನಸ್ಥರಲ್ಲಿಯೂ ಈ ಸಮಸ್ಯೆ ಇದೆ, ಎಂದರು. ಇದಲಿಂದ ನಾನು ಪ್ರಭಾವಿತನಾದೆ. ಅದಕ್ಕೆ ಕಾರಣವೇನೆಂದರೆ ಈ ಹೇಳಿಕೆಯನ್ನು ನೀಡಿದವರು ಒಬ್ಬ ಪ್ರಭಾವ ಮನುಷ್ಯನಾಗಿದ್ದನು. ನಮ್ಮಲ್ಲಿ ಉದ್ಭವಿ ಸಿರುವ ಅನೇಕ ವಿಭಜನೆಗಳ ಕುರಿತಾಗಿಯು ಪ್ರಭಾವಿತನಾಗಿದ್ದೇನೆ. 1987ನೇ ಇಸವಿಯಲ್ಲಿ ಮುದ್ರಿತವಾದ *ವೇರ್ ದ ಸೇಯಿಂಟ್ಸ್ ಮೀಟ್* ಎಂಬ ಪುಸ್ತಕದಲ್ಲಿ ಕ್ರಿಸ್ತ ಸಭೆಗಳ ಕುರಿತಾಗಿ ಹತ್ತೊಂಭತ್ತು ವಿಧವಾದ ಭಾಗಗಳನ್ನು ವಿಶ್ಲೇಸಿಸಲಾಗಿದೆ. ಕೆಲವು ಸಭೆಗಳು ಬೆಳೆಯುತ್ತಾ "ಅಹಿತವಾದಂಥ ವಿಭಜನೆಗಳನ್ನು ವ್ಯತಿರಿಕ್ತವಾದ ವಾಗ್ವಾದಗಳನ್ನು ಮತ್ತು ಅನಗತ್ಯವಾದ ಹೊಂದಾಣಿಕೆಗಳನ್ನು ಮಾಡಿಕೊಂಡು ಪರಸ್ಪರ ಕಚ್ಚಾಡುವದನ್ನು ನಾನು ನೆನಪು ಮಾಡಿ ಕೊಂಡೆನು" ಯಾಕೋಬ 4:1-10ರಲ್ಲಿ ಇವುಗಳ ಸಮಸ್ಯೆಗಳ ಕುರುಹು ಆಗಿದೇ ವಿನಃ ಅವು ಸಮಸ್ಯೆಗಳೇ ಆಗಿರುವದಿಲ್ಲ.

ಆ ದಿನದ ಕ್ರೈಸ್ತರಂತೆ, ಈ ದಿನದ ಕ್ರೈಸ್ತರಲ್ಲಿಯೂ ವ್ಯತ್ಯಾಸಗಳು ಇವೆ ಎಂದು ಯಾಕೋಬನು ತಿಳಿಸಿದ್ದಾನೆ. ಅವರು ಜೀವಿತದ ಹೊರಗೂ ಮತ್ತು ಒಳಗೂ ಇರುವ ಸಮಸ್ಯೆಗಳಿಗೆ ತುತ್ತಾಗಿದ್ದರು. ಅವರು ಇತರರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿರಲಿಲ್ಲ, ಮುಖ್ಯವಾಗಿ ಆರ್ಥಿಕ ಸಮಸ್ಯೆ ಇದ್ದವರ ಬಳಿಯಲ್ಲಿ ಅವರ ನಡತೆಯ ಮೂಲಕ ಅವರು ಎಂಥವರು ಎಂಬುದಾಗಿ ತಿಳಿಯುತ್ತಿತ್ತು. ಕೆಲವರು ಯಥೇಚ್ಛವಾಗಿ ಮಾತನಾಡುತ್ತಿದ್ದರು, ವಾಗ್ವಾದ ಮಾಡುತ್ತಿದ್ದರು, ಟೀಕಿಸುತ್ತಿದ್ದರು, ಅಥವಾ ತಮ್ಮನ್ನು ತಾವೇ ಹೆಚ್ಚಿಸಿಕೊಳ್ಳುತ್ತಿದ್ದರು. ನಮ್ಮ ಸಭೆಗಳ ಹಾಗೆ, ಆದಿ ಸಭೆಗಳವರು ಸಹ ಇದ್ದರು: ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಮಾದಾನದವೆಂಬ ಬೀಜವನ್ನು ಬಿತ್ತಿ ನೀತಿ ಎಂಬ ಫಲವನ್ನು ಕೊಯ್ಯುವ ಬದಲು (3:18), ಅವರು "ಯುದ್ಧಗಳಲ್ಲಿಯೂ ಮತ್ತು ಕದಾಟದಲ್ಲಿಯೂ ನಿರತರಾಗಿದ್ದರು" (4:1).

ಈ ಕಾರಣದಿಂದಲೇ ಅವರು ಪರಸ್ಪರ ಹೊಂದಾಣಿಕೆಯಲ್ಲಿ ಮುನ್ಸಾಗಲು ಕಷ್ಟವಾ ಗುತ್ತದೆ ಎಂದು ಯಾಕೋಬನು ಸ್ಪಷ್ಟಪಡಿಸಿದ್ದಾನೆ.

## ಘರ್ಷಣೆಗಳು (4:1-3)

(4:1) ಅವರ ಸಮಸ್ಯೆಗಳ ಮೂಲವನ್ನು ಶೀಘ್ರವೇ ತಿಳಿಯಬೇಕೆಂದು ಮತ್ತು "ಅವರಲ್ಲಿರುವ ಯುದ್ಧಗಳ ಮತ್ತು ಕಾದಾಟಗಳ" ಕುರಿತು ಯಾಕೋಬನು ದೃಢವಾದಂತ ಕ್ರೈಸ್ತರೊಂದಿಗೆ ಮಾತನಾಡುತ್ತಿದ್ದನು. "ನಿಮ್ಮಲ್ಲಿ" ಎಂಬ ಹೇಳಿಕೆಯನ್ನು ನೀಡಿ ಅವರು ಕ್ರಿಸ್ತನ ಹಿಂಬಾಲಕರಾಗಿ ಜೀವಿಸದೇ ಇರುವದನ್ನು ತಿಳಿಸಿದನು. ಹೊಸ ಒಡಂಡಿಕೆಯ ಕೆಲವು ಸಭೆಗಳನ್ನು ಪರಿಶೀಲಿಸಿದಾಗ ಅವರೆಲ್ಲರಲ್ಲಿಯೂ ಒಪ್ಪಂದದ ಕುರಿತು ವ್ಯತ್ಯಾಗಳಿದ್ದವೆಂಬ ಅಂಶ ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಕೊರಿಂಥ ಸಭೆಯ ಸದಸ್ಯರುಗಳು ಕೆಲವರನ್ನು ನ್ಯಾಯಾಲಯದಲ್ಲಿ ಸಂಧಿಸುತ್ತಿದ್ದರು ಮತ್ತು ಸಭೆಯಲ್ಲಿಯೂ ಇತರರೊಂದಿಗೆ ಸ್ಪರ್ಧಿಸುತ್ತಿದ್ದರು

(1 ಕೊರಿಂಥ 6:1, 8; 14:23-40). ಗಲಾತ್ಯ ಸಭೆಯವರು ಒಬ್ಬರನ್ನೊಬ್ಬರು "ಕಚ್ಚಿ ಹರಕೊಂಡು ನುಂಗುವವರಾಗಿದ್ದರು" (ಗಲಾತ್ಯ 5:15). ಪೌಲನ ಪ್ರೀತಿಯ, ಫಿಲಿಪ್ಪಿ ಸಭೆಯಲ್ಲಿ ಇಬ್ಬರು ಸ್ತ್ರೀಯರಲ್ಲಿ ಪರಸ್ಪರ ಹೊಂದಾಣಿಕೆ ಇರಲಿಲ್ಲ (ಫಿಲಿಪ್ಪಿ 4:2, 3). ಆದಿಸಭೆಯಲ್ಲಿ ಪ್ರಾರಂಭಗೊಂಡ ಸಮಸ್ಯೆಯು 1980ನೇ ಸಭೆಗಳವರೆಗೂ ವಿಸ್ತರಗೊಂಡಿದೆ.

ಈ ಸಮಸ್ಯೆಯ ಕುರಿತಾಗಿ ಯಾಕೋಬನು ಉಪಯೋಗಿಸುತ್ತಿರುವ ಬಲವಾದ ಪದ ಪ್ರಯೋಗವು ಆಶ್ಚರ್ಯವನ್ನುಂಟು ಮಾಡುತ್ತದೆ. ಇದರ ಕುರಿತು NIV ತರ್ಜುಮೆಯು ಬಲಹೀನವಾಗಿದೆ, "ಯುದ್ಧ ಮತ್ತು ಹೋರಾಟ" (KJV, ASV, RSV) ಎಂಬುದಾಗಿ ಇವುಗಳಲ್ಲಿ "ಯುದ್ಧಗಳು ಮತ್ತು ಹೋರಾಟಗಳು" ಎಂಬುದಾಗಿದೆ 4:1-3ರಲ್ಲಿ ಯುದ್ಧಕ್ಕೆ ಸಂಬಂಧಪಟ್ಟ ಭಾಷೆಯನ್ನು ಯಾಕೋಬನು ಉಪಯೋಗಿಸಿರುವದರಿಂದ ಅದರ ಹಿನ್ನಲೆಯಲ್ಲಿರುವ ಹೃದಯಗಳನ್ನು ನಾಟುವಂತ ಭಯಾನಕ ಪದಗಳನ್ನು ಮತ್ತು ಅದರ ಬಲವನ್ನು ನಿರ್ಲಕ್ಷಮಾಡಬಾರದು. ಯಾಕಂದರೆ ಈ 20ನೇ ಶತಮಾನದಲ್ಲಿ ಮುಂದುವರೆದಿರುವ ಮಾಹಿತ ತಂತ್ರ ಜ್ಞಾನಗಳ ಮೂಲಕ ದೈಹಿಕವಾದಂತಹ ಯುದ್ಧಗಳು ನಡೆಯುವಂತ ವಿಷಯಗಳನ್ನು ತಿಳಿಕೊಂಡಿರುವದರಿಂದ, ನಮ್ಮ ಹೃದಯಗಳನ್ನು ಕಠಿಣ ಪಡಿಸಿಕೊಳ್ಳಬಾರದು. ನಾವು, ಮತ್ತು ನಮ್ಮ ಜನಾಂಗಗಳು ಯುದ್ಧ ವಿಷಯಗಳ ಕುರಿತು ವೈಯಕ್ತಿಕ ಅರಿತುಕೊಳ್ಳಲು ಅಶಕರಾಗಿ ದ್ದೇವೆ. ಇಲ್ಲಿ ಯಾಕೋಬನು ತಿಳಿಸಿರುವ ವಿಷಯಕ್ಕೆ ನಮ್ಮ ಮನಸ್ಸನ್ನು ಎಚ್ಚರಪಡಿಸಿಕೊಳ್ಳ ಬೇಕು. ಯಾಕೋಬನು ಯುದ್ಧಗಳು ಮತ್ತು ಹೋರಾಟವೆಂಬ ಯುದ್ಧಕ್ಕೆ ಸಂಬಂಧಪಟ್ಟ ಪದಗಳನ್ನು ಉಪಯೋಗಿಸಿದ್ದಾನೆ. ಅವರಲ್ಲಿರುವ ಮೃಗ ಸ್ವಭಾವ ಮತ್ತು ಕೆಟ್ಟ ಯೋಚನೆ ಗಳಿಂದ ಕ್ರೈಸ್ತರು ಭಯಾನಕವಾದಂತ ಪರಿಸರವನ್ನು ಸೃಷ್ಟಿಮಾಡುತ್ತಾರೆ.

ಸ್ಥಳೀಯ ಸಭೆಗಳು ದೇವರ ದೃಷ್ಟಿಯಲ್ಲಿರತಕ್ಕ ಸಂಬಂಧಗಳನ್ನು ನೋಡಬೇಕು. ನುರಿತ ತಜ್ಞವೈದ್ಯನು, ದೇಹವನ್ನು ನಾಶಪಡಿಸುವಂತ ಕ್ಯಾನ್ಸರ ರೋಗವನ್ನು ಕಂಡುಹಿಡಿಯುವಂತೆ ನಾವು ಸಹ ಸಭೆಯಲ್ಲಿರತಕ್ಕ ಸಮಸ್ಯೆಗಳನ್ನು ಕಂಡು ಹಿಡಿಯಬೇಕು. ಯಾಕೋಬನ ದಿವಸಗಳ ಕ್ರೈಸ್ತರು (ಮತ್ತು 20 ನೇ ಶತಮಾನದವರು) ಪರಸ್ಪರ ಹೊಂದಾಣಿಕೆಯಲ್ಲಿ ಸಾಗುವದಕ್ಕೆ ಸಾಧ್ಯವಿಲ್ಲದಿರುವ ಕಾರಣವೇನೆಂದರೆ ಅವರ ಇಂದ್ರಿಯಗಳಲ್ಲಿರುವ ಹೋರಾ ಡುವ ಭೋಗಾಸೆಗಳೇ (4:1ಬಿ). ಕ್ರೈಸ್ತನ ಅಂತರಾಳದಲ್ಲಿ ನಿರಂತರವಾದ ಹೋರಾಟ ಗಳಿರುತ್ತವೆ. ಯಾಕೋಬನು ಮನುಷ್ಯನ ಅಂತರಾಳದ ಹೋರಾಟದ ಕುರಿತು ಭಾಷಾ ಚಿತ್ರವನ್ನು ಉಪಯೋಗಿಸಿದ್ದಾನೆ. ಆ ಹೋರಾಟಗಳು ಸ್ವಾರ್ಥ ಮತ್ತು ನಿಸ್ವಾರ್ಥ ಜೀವಿತದ ಆಯ್ಕೆಯ ಮೇಲೆ ಅವಲಂಭಿಸಿರುತ್ತದೆ.

ತಪ್ಪಾದ ಆಯ್ಕೆಯನ್ನು ಮಾಡಿಕೊಂಡರೆ, ಹತೋಟಿಗೆ ಬಾರದಂತ ಕಾರ್ಯಗಳ ಮೂಲಕ ಇತರ ಕ್ರೈಸ್ತರನ್ನು ತನ್ನ ಸ್ವಾಧೀನಕ್ಕೆ ತಂದುಕೊಳ್ಳಲು ಯತ್ನಿಸುತ್ತಾನೆ (4:2). ಸಹಜವಾಗಿ, ಸ್ಥಳೀಯ ಸಭೆಗಳ ಸಂಬಂಧಗಳು ಕೆಡುತ್ತವೆ ತನಗೆ ಬರ ಬೇಕಾದ ಗೌರವವು ಇನ್ನೊಬ್ಬನಿಗೆ ಸಂಧಾನವಾಗುವಾಗ ಅದನ್ನು ಪುನಃ ಪಡೆದು ಕೊಳ್ಳಲು ಪ್ರಯತ್ನಿಸುತ್ತಾನೆ. ಆದುದರಿಂದ ಅವರು ಅಶಿಸಿದರೂ ಹೊಂದುವವರಲ್ಲ, ಮತ್ತು ಅವರ ಪ್ರಾರ್ಥನೆಗಳಿಗೆ ಈ ಬೋಗಾಶೆಗಳು ಅಡ್ಡಿಯನ್ನುಂಟು ಮಾಡುತ್ತವೆ (4:2, 3).

ನಾವು ಈ ಸಮಸ್ಯೆಯನ್ನು ಈ ದಿನಗಳಲ್ಲಿ ಎದುರಿಸುತ್ತಿದ್ದೇವೆಯೇ? ಹೌದು! "ಅನೇಕ ಸಭೆಗಳಲ್ಲಿ ಈ ವಿಷಯಗಳನ್ನು ಮೇಲ್ವಿಚಾರಣೆ ಮಾಡುವವರು ಅಥವಾ ಹತೋಟಿಗೆ ತರುವವರು ಯಾರಿದ್ದಾರೆ?" ಎಂಬ ಪ್ರಶ್ನೆಯು ಉಂಟಾಗುತ್ತದೆ. ಈ ವಿಧವಾ ದಂತ ಸಮಸ್ಯೆಗಳ ಕುರಿತಾಗಿ ಯಾಕೋಬನು ಹಿಂದಿನ ಅಧ್ಯಾಯದಲ್ಲಿ ತಿಳಿಸಿರುವಂತೆ, "ತೀಕ್ಷಣವಾದ ಮತ್ಸರವು ಕಕ್ಷ ಬೇಧವು" ನಮ್ಮ ಹೃದಯದೊಳಗಿಂದಲೇ ಉದ್ಭವಿಸುತ್ತವೆ. ನಮ್ಮಲ್ಲಿ ಎಲ್ಲಾ ಉತ್ತರಗಳಿವೆಂಬುದಾಗಿ ನಿರ್ಣಯಿಸಿಕೊಂಡರೂ ಯಾಕೆ ಜನರು ನಮ್ಮ ನಾಯಕತ್ವವನ್ನು ಬಯಸುವದಿಲ್ಲ. ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಅಸಾಧ್ಯವಾ

ಗುತ್ತದೆ, ಅವರು ನಮ್ಮನ್ನು ದೃಷ್ಟಿಸದೇ ಇರುವಾಗ ಜನರು ನಮ್ಮ ಸೆಳವಿಯಲ್ಲಿ ಇರಬೇಕು ಎಂದು ಕಾರ್ಯಗಳನ್ನು ಮಾಡುತ್ತೇವೆ.

ಇಲ್ಲಿ ಯಾಕೋಬನು ಉಪಯೋಗಿಸುವ ಪದವು ವೈಪರೀತ್ಯವೆನಿಸುತ್ತದೆ, ಇಂಥ ಒಂದು ಭಯಂಕರವಾದ ವಿಶ್ಲೇಷಣೆಯನ್ನು ನಾವು ಗಮನಿಸುವಾಗ, ನಮ್ಮ ಅಲ್ಪಕಾರ್ಯಗಳಿಗೂ ಮತ್ತು ಹೋರಾಟಗಳಿಗೂ ಅವನ ಭಾಷೆಯು ಯೋಗ್ಯವಾಗಿದೆ ಅನಿಸುತ್ತದೆ. ಇದನ್ನು ನಾವು ಕಾರ್ಯರೂಪವಾಗಿ ಪರಿಗಣಿಸುವಾಗ, ಯೇಸುವಿನ ವಿಧೇಯತೆಗೆ ಒಳಗಾಗುವದಕ್ಕೆ ಅಪೂರ್ಣವಾದ ಆಲೋಚನೆಗಳನ್ನು ಹೊಂದಿದ್ದೇವೆ. ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯವಿಚಾರಣೆಗೆ ಗುರಿಯಾಗುವನು. (ಮತ್ತಾಯ 5:21, 22)ರಲ್ಲಿ ಹೇಳಿರುವ ಮಾತಿನಲ್ಲಿ ತನ್ನನ್ನು ತಾನು ಹೆಚ್ಚಿಸಿಕೊಂಡಿರುವೆನೋ? ಸಹೋದರರನ್ನು ಪ್ರೀತಿಸುವಲ್ಲಿ ಕಾಯೀನಂತಿರಬಾರದೆಂಬ ಹೇಳಿಕೆಯಲ್ಲಿ ಯೋಹಾನನು ತನ್ನನ್ನು ಹೆಚ್ಚಿಸಿಕೊಂಡಿರುವನೋ (1 ಯೋಹಾನ 3:11, 12)? ಸಭೆಯಲ್ಲಿರತಕ್ಕ ಮುರಿದು ಹೋದ ಸಂಬಂಧಗಳಿಗೆ ನಾವೇ ಕಾರಣರಾಗಿದ್ದೇವೆ. ನಮ್ಮೊಂದಿಗೆ ಹೊಂದಾಣಿಕೆಯಾಗಿ ಹೋಗದೆ ಇರುವಂತ ಸಹೋದರ, ಸಹೋದರಿಗೆ ಮುಗುಳ್ನಗೆ ತೋರಿಸಿದರೂ ಅಂತರಾಳದಲ್ಲಿ ಸಹಿಸಲಾರದ ಮನೋವೇದನೆಯನ್ನು ಹೊಂದಿರುತ್ತೇವೆ. ಇಬ್ಬರು ಸಹೋದರರು ಪರಸ್ಪರವಾಗಿ ಹೊಂದಾಣಿಕೆಯಿಂದ ಮುಂದೆ ಸಾಗದೇಯಿರುವಾಗ ನಾವು ಭುಜ ಎಗರಿಸಿ ಉದಾಸೀನತೆಯನ್ನು ತೋರಿಸುತ್ತೇವೆ. ನಾವು "ಯುದ್ಧಗಳನ್ನು" ಸಹಿಸದವರು ಮತ್ತು "ಹೋರಾಟಗಳು" ನಡೆಯುವಾಗ, ನಮ್ಮ ಭುಜಗಳನ್ನು ಎಗರಿಸಿ ನಿರಾಸಕ್ತಿಯನ್ನು ತೋರಿಸದೇ ಇರೋಣ.

## ಸ್ವಾರ್ಥದ ಖಂಡನೆ (4:4-6)

ಸಮಾದಾನದ, ನೀತಿಯ ಫಲವನ್ನು ನಮ್ಮ ಸ್ವಂತ ಸ್ವಾರ್ಥವು ನಾಶಪಡಿಸುತ್ತದೆ. ಆದುದರಿಂದ ಯಾಕೋಬನು ಈ ವಿಷಯವನ್ನು ಕೆಳಮಟ್ಟಕ್ಕೆ ಇಳಿಸುತ್ತಾನೆ (4:4). ಸ್ವಾರ್ಥವು ನಮ್ಮನ್ನು ದೇವರ ಸಂಬಂಧದಿಂದ ಮಾತ್ರ ಬೇರ್ಪಡಿಸದೆ, ಮನುಷ್ಯನಿಂದಲೂ ಪ್ರತ್ಯೇಕಪಡಿಸಿರುತ್ತದೆ. ಇಲ್ಲಿ ಯಾಕೋಬನು ದೇವರ ಮಕ್ಕಳನ್ನು ಆತನ ಕನ್ಯೆ ಎಂದು ತಿಳಿಸಿದ್ದಾನೆ. "ನಾನು ಮಾಡುತ್ತೇನೆ" ಎಂದು ನಂಬಿಕೆಯ ಮೂಲಕ ಹೇಳುವ ವಿಷಯವಾಗಿರುತ್ತದೆ ಇಲ್ಲವಾದರೆ ಅದು ಆತ್ಮೀಕವಾದ ವ್ಯಭಿಚಾರವಾಗಿರುತ್ತದೆ. ಪ್ರಾಪಂಚಿಕವಾದ ಸ್ವಾರ್ಥಕ್ಕೆ ಒಳಗಾಗಿರುವುದು, ದೇವರ ನೀತಿಗೆ ವಿರುದ್ಧವಾಗಿರುತ್ತದೆ. ದೇವರು ಮತ್ತು ಸ್ವಾರ್ಥ ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳ ಬೇಕು; ಎರಡನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ.

ಯಾಕೋಬ 4:5, "ಶಾಸ್ತ್ರೋಕ್ತಿಯು ಬರೀ ಮಾತೆಂದು ಭಾವಿಸುತ್ತೀರೋ? ದೇವರು ನಮ್ಮಲ್ಲಿರಿಸಿರುವ ಪರಿಶುದ್ಧಾತ್ಮನು ಅಭಿಮಾನತಾಪದಿಂದ ನಮಗೋಸ್ಕರ ಹಂಬಲಿಸುತ್ತಾನಲ್ಲವೋ?" ಇದನ್ನು ಗ್ರಹಿಸಲು ಮತ್ತು ವಿಶ್ಲೇಷಿಸಲು ಕಷ್ಟವಾಗುತ್ತದೆ. ವಚನದಲ್ಲಿ ಕೆಲವು ತೊಡಕುಗಳು ಉದ್ಭವಿಸುತ್ತವೆ. "ಶಾಸ್ತ್ರೋಕ್ತಿಯ ಮಾತುಗಳು" ಎಂಬುದು ಇತರೆ ವಾಕ್ಯಗಳು ಅದನ್ನು ವಿವರಿಸುತ್ತವೆ ಎಂಬ ಬಯಕೆಯನ್ನು ನೀಡುತ್ತದೆ ಅಥವಾ ಅವುಗಳು ತಿಳಿಸಬಹುದು ಎನಿಸುತ್ತದೆ. ಆದರೆ ಅದರ ಬಯಕೆಯು ಈಡೇರಿಸುವದಿಲ್ಲ. ಎರಡನೆಯದಾಗಿ, ಆ ವಚನದ ಕಡೆಯ ಅರ್ಧ ಭಾಗವನ್ನು ಯಾವ ರೀತಿಯಲ್ಲಿ ಅನುವಾದಿಸಬೇಕೆಂದು ಪಂಡಿತರುಗಳು ಗೊಂದಲಕ್ಕೀಡಾಗಿದ್ದಾರೆ. ಕೆಲವು ವಿಧದ ಅನುವಾದಗಳು ಹೀಗಿರುತ್ತವೆ. "... ನಮ್ಮಲ್ಲಿ ವಾಸಿಸುವ ಆತ್ಮನು ಅಭಿಮನತಾಪಪಡುತ್ತಾನೆ ..." (KJV); ಅಥವಾ "... ನಮ್ಮಲ್ಲಿರುವ ಆತ್ಮಕ್ಕಾಗಿ ಆತನು ತಾಪಪಡುತ್ತಾನೆ" (RSV). ಈ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಿಲ್ಲದಿದ್ದರೂ, ದೇವರು ನಮಗೆ ನೀಡಿರುವ ಆತ್ಮನಿಗೆ ಬದಲಾಗಿ ಪ್ರತಿಸ್ಪರ್ದಿಯ ಆತ್ಮಗಳು ನಮ್ಮಲ್ಲಿ ಇರಬಾರದೆಂದು ಅಭಿಮಾನ ತಾಪಪಡುತ್ತಾನೆ. ಪ್ರತಿ ಹೃದಯವು ಪರಿಪೂರ್ಣವಾಗಿ ಸಮರ್ಪಣೆಗೊಳ್ಳಬೇಕು ಎಂದು ದೇವರು ಭಾವಿಸುತ್ತಾನೆ.

ಆದರೆ ಅಭಿಮಾನತಾಪವುಳ್ಳ ದೇವರು ಕೃಪಾಪೂರ್ಣನಾಗಿದ್ದಾನೆ. ಯಾಕೋಬನ ಹೇಳಿಕೆ ಏನೆಂದರೆ, "ಆತನು ನಮ್ಮ ಮೇಲೆ ಅತಿಶಯವಾದ ಕೃಪೆಯನ್ನು ಇಡುತ್ತಾನೆ, ಆದುದರಿಂದ ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (4:6). ನಾವು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳ ಬೇಕೆಂಬುದು ದೇವರ ಚಿತ್ತವಾಗಿದೆ ಎಂದು ಈಗಾಗಲೇ ತಿಳಿದಿದ್ದೇವೆ. ನಾವು ಎಷ್ಟೋ ಸಾರಿ ದೇವರನ್ನು ಬಿಟ್ಟು ನಮ್ಮ ಸ್ವಂತ ಇಚ್ಛೆಯನುಸಾರ ನಡೆದಿದ್ದೇವೆ ಎಂದು ಒಪ್ಪಿಕೊಳ್ಳಲೇಬೇಕು. ದೇವರು ನಮ್ಮಿಂದ ಅತಿಶಯವಾದ ಕಾರ್ಯವನ್ನು ಬಯಸಿ, ಅದನ್ನು ನೆರವೇರಿಸಲು ತನ್ನ ಕೃಪೆಯನ್ನು ನೀಡುತ್ತಾನೆ. ವಿಶ್ವಾಸಿಗಳಿಗೆ ಈ ಆಯ್ಕೆಯು ಸಹಜವಾಗಿರುತ್ತದೆ. ಅವರು ತಗ್ಗಿಸಿಕೊಂಡರೆ ದೇವರ ಕೃಪೆಯನ್ನು ಹೊಂದುತ್ತಾರೆ. ಅಥವಾ ಸ್ವಾರ್ಥವನ್ನು ಅನುಸರಿಸಿದರೆ, ದೇವರ ಕೋಪಕ್ಕೆ ಒಳಗಾಗುತ್ತಾರೆ.

## ಆಯ್ಕೆ (4:7-10)

ಸ್ವಾರ್ಥದಿಂದ ಬಿಡುಗಡೆ ಹೊಂದುವದಕ್ಕೂ ಮತ್ತು ದೇವರ ಹತೋಟಿಗೆ ಒಳಗಾಗುವದಕ್ಕೂ ದುರಾಶೆಯನ್ನು ಬಿಟ್ಟು "ದೇವರಿಗೆ ಒಳಗಾಗಿರಿ ಎಂದು ಯಾಕೋಬನು ತಿಳಿಸುತ್ತಾನೆ ..." (4:7). "ಅಧೀನತೆಗೆ ಒಳಗಾಗು" ಎಂಬುದು ಸೇನೆಯಲ್ಲಿ ಉಪಯೋಗಿಸುವ ಪದವಾಗಿರುತ್ತದೆ. "ಮತ್ತೊಬ್ಬನಿಗೆ ಒಳಗಾಗುವುದು ಎಂಬುದಾಗಿ" ಸ್ವಾರ್ಥದ ರೋಗದಿಂದ ಗುಣಮುಖನಾಗಲು, ಒಬ್ಬ ಕ್ರೈಸ್ತನು, ದೇವರಿಗೆ ಒಳಗಾಗಬೇಕು.

ಅಧೀನತೆ ಎಂಬ ವಿಷಯದ ಬೈಬಲ್ ಬಹು ಕಷ್ಟದ ಪದವಾಗಿದೆ. ಈ ಹೇಳಿ ಕೆಯನ್ನು ಕೇಳುವಾಗ, ನಾವು ಸ್ವಲ್ಪ ನಿಧಾನಸಿ, ಈ ಪ್ರಶ್ನೆಯನ್ನು ಕೇಳಿಕೊಳ್ಳೋಣ, "ಆ ವಾಕ್ಯದ ಅರ್ಥವೇನು?" ಅಥವಾ "ನಾನು ಅದನ್ನು ಹೇಗೆ ಮಾಡಲಿ?" ಯಾಕೋಬನಲ್ಲಿ ಮಸ್ಪೆಯು ಇರುವದಿಲ್ಲವೇ! ಅಧೀನತೆಯ ಕುರಿತಾಗಿ ಯಾಕೋಬನು ಐದು ವಿಷಯಗಳನ್ನು ತಿಳಿಸಿ ಮುಗಿಸುವವನಾಗಿದ್ದಾನೆ.

*ಮೊದಲನೆಯದಾಗಿ, "ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು" (4:7).* ಸೈತಾನನು ಕ್ರೈಸ್ತರಿಗೆ ತನ್ನ ಕೆಟ್ಟ ಮುಖಭಾವದಿಂದ ಆಕರ್ಷಿಸುತ್ತಾನೆ, ವಿನಃ ಅವರ ಮೇಲೆ ಚಲಾಯಿಸಲು ಯಾವ ವಿಧವಾದ ಅಧಿಕಾರದ ಶಕ್ತಿಯು ಅವನಲ್ಲಿರುವದಿಲ್ಲ. ನೀವು ಸೈತಾನನ ಆಕರ್ಷಣೆಗಳನ್ನು ಯೋಚನೆಗಳನ್ನು ಎದುರಿಸಿದರೆ, ಸೈತಾನನು ನಿಮ್ಮನ್ನು ಬಿಟ್ಟು ಓಡಿಹೋಗುವನು ಎಂದು ಯಾಕೋಬನು ತಿಳಿಸಿದ್ದಾನೆ.

*ಎರಡನೆಯದಾಗಿ, "ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು ..." (4:8).* ನಮ್ಮ ಪಾಪಗಳೇ ನಮ್ಮನ್ನು ದೇವರಿಂದ ಪ್ರತ್ಯೇಕಮಾಡಿರುತ್ತವೆ. ನಮ್ಮ ಸ್ವಾರ್ಥವು ನಿರ್ಮೂಲವಾಗಬೇಕಾದರೆ, ದೇವರ ನಿಕಟವಾದ ಸಂಬಂಧಕ್ಕೆ ಬದ್ಧರಾಗಬೇಕು.

*ಮೂರನೆಯದಾಗಿ, "... ನಿಮ್ಮ ಕೈಗಳನ್ನು ಶುಚಿ ಮಾಡಿಕೊಳ್ಳಿರಿ, ಎರಡು ಮನಸ್ಸುಳ್ಳವರೆ ನಿಮ್ಮ ಹೃದಯಗಳನ್ನು ನಿರ್ಮಲಮಾಡಿಕೊಳ್ಳಿರಿ" (4:8).* ಒಬ್ಬನು ದೇವರಿಗೆ ಸಮೀಪನಾದರೆ, ಅವನಿಂದ ಪಾಪವು ದೂರವಾಗುತ್ತದೆ ಸ್ವಾರ್ಥವು ಅಶುದ್ಧತೆಯನ್ನು ಉಂಟುಮಾಡಿರುವದರಿಂದ ಶುದ್ಧತೆಯ ಅವಶ್ಯವಿರುತ್ತದೆ. "ಕೈ" ಮತ್ತು "ಹೃದಯ" ಎಂಬ ಪದವು ನಾವು ಒಳಗೂ ಮತ್ತು ಹೊರಗೂ ಶುದ್ಧರಾಗಬೇಕು ಎಂಬ ಅರ್ಥವಾಗಿದೆ.

*ನಾಲ್ಕನೆಯದಾಗಿ, ದುಃಖಿಸಿರಿ, ಗೋಳಾಡಿರಿ, ಸಂತೋಷವನ್ನು ಬಿಟ್ಟು ಗೋಳಾಡಿರಿ, ನಗುವದನ್ನು ಬಿಟ್ಟು ಮನಗುಂದಿದವರಾಗಿರಿ" (4:9).* ಯೇಸುವಿನ ಪದವನ್ನು ಪ್ರತಿಧ್ವನಿಸಿ (ಮತ್ತಾಯ 5:4), ನಮ್ಮ ಅಧೀನತೆಯು ಮಾನಸಾಂತರವನ್ನು ತೋರಿಸ ಬೇಕು. ಎಂದು ಯಾಕೋಬನು ತಿಳಿಸುತ್ತಾನೆ.

*ಐದನೆಯದಾಗಿ, "ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆಗಲಾತನು ನಿಮ್ಮನ್ನು ಮೇಲಕ್ಕೆ ತರುವೆನು" (4:10).* ಯೆಹೋವನು ಸೃಷ್ಟಿಕರ್ತನು ನಾವು ಆತನ ಸೃಷ್ಟಿಗಳೆಂದು ತಿಳಿದುಕೊಳ್ಳಲೇಬೇಕು. ನಾವು ಈ ರೀತಿಯಾದ ತಿಳುವಳಿಕೆಗೆ ಬಂದಾಗ ವಿಧೇಯತೆಗೆ ಅನುಕೂಲವಾದ ಮನಸ್ಸನ್ನು ಹೊಂದಿಕೊಳ್ಳುತ್ತೇವೆ. ನಾವು ಸೇವಕರ ಪಾತ್ರವನ್ನು ವಹಿಸಿಕೊಳ್ಳುತ್ತೇವೆ ವಿನಃ, ನಮ್ಮ ಸ್ವಂತ ಚಿತ್ತವನ್ನಲ್ಲ ಆದರೆ ಪರಲೋಕ ತಂದೆಯ ಚಿತ್ತವನ್ನೆ ಪಾಲಿಸುತ್ತೇವೆ. ಅಧೀನತೆಯು ದೇವರ ಆತ್ಮಿಕ ಆಶೀರ್ವಾದಗಳಿಗೆ ನಡಿಸುತ್ತದೆ. ಉನ್ನತವಾದ ಜೀವಿತವನ್ನು ಜೀವಿಸಬೇಕೆಂದು ಯಾಕೋಬನು ಬರೆಯುತ್ತಿದ್ದಾನೆ. ನಿತ್ಯನಾದ ದೇವರ ಮುಂದೆ ಅಡ್ಡಬಿದ್ದು ಕರುಣೆಗಾಗಿ ಬೇಡಿಕೊಳ್ಳುವ ಚಿತ್ರಣವನ್ನು ಯಾಕೋಬನು ತೋರ್ಪಡಿಸಿದ್ದಾನೆ. ಸಿಂಹಾಸನದಲ್ಲಿರುವ ಪ್ರಭುವು ಪಾರ್ಥಿಸುವವನ ಮುಖವನ್ನು ಭೂಮಿಯಿಂದ ಮೇಲಕ್ಕೆ ಎತ್ತುತ್ತಾನೆ. ತನ್ನ ಮನವಿಯನ್ನು ಅರಸನು ನೇರವೇರಿಸಿದನೆಂದು ಅವನು ಸಂತೋಷದಿಂದ ಮೇಲಕ್ಕೇಳುವನು.

## ಮುಕ್ತಾಯ

ಯಾಕೋಬನ ವ್ಯಾಖ್ಯಾನದಲ್ಲಿರುವ ಪ್ರಾಮುಖ್ಯತೆಯನ್ನು ತಿಳಿದುಕೊಂಡಿದ್ದೇವೋ? "ಯುದ್ಧಗಳು ಮತ್ತು ಹೋರಾಟಗಳ" ಕುರಿತು ಗ್ರಹಿಸಿಕೊಂಡಿದ್ದೇವೋ ಆ ಯುದ್ಧಗಳು ಮತ್ತು ಹೋರಾಟಗಳು ಸ್ವಾರ್ಥಕ ಆಶೆಯಿಂದ ಉದ್ಭವಿಸಿದವೆಂದು ತಿಳುಕೊಳ್ಳಬೇಕು. ಈ ದುರಾಶೆಗಳು ನಮ್ಮ ಮತ್ತು ದೇವರ ಸಂಬಂಧವನ್ನು ಹದಗೆಡಿಸುತ್ತವೆ. ಅಧೀನತೆಗೆ ಒಳಗಾಗುವ ಮಾರ್ಗದಿಂದ ಮಾತ್ರ ನಾವು ಸ್ವಾರ್ಥವನ್ನು ತ್ಯಜಿಸಬಹುದು.

ನೀನು ನಿನ್ನ ದೇವರಿಗೆ ಅಧೀನನಾಗಿರುವೆಯೋ?